[C.R.P.] ಕರ್ನಾಟಕ ಸರ್ಕಾರ

Form No. 4
(Criminal)
Deposition Sheets
(R.P. No. 57)

# ಅಪರ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಗದಗ

**ಎಸ್ ಸಿ/ಎಸ್ ಟಿ ನಂ.20/2023**

**ಸಿಡಬ್ಲ್ಯೂ 13 /ಪಿಡಬ್ಲ್ಯೂ 3**

**ದಿನಾಂಕ: 16.11.2023**

**ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರನ/ಳ ಹೆಸರು | - | ಬಸವರಾಜ ಹರಪನಹಳ್ಳಿ |
| ತಂದೆಯ / ಗಂಡನ ಹೆಸರು | - | ಹುಲಗಪ್ಪ |
| ವಯಸ್ಸು | - | 35 ವರ್ಷ |
| ಉದ್ಯೋಗ | - | ಹಮಾಲಿ ಕೆಲಸ |
| ವಾಸಸ್ಥಳ | - | ಮುಂಡರಗಿ |

## ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ

1. ನನಗೆ ಚಾಸಾಃ1 –ಮಾರುತಿ ಭಜಂತ್ರಿ ಇವರ ಪರಿಚಯ ಇದೆ. ಆತನ ಹೆಂಡತಿ ಚಾಸಾಃ9–ಶೋಭಾ ಇವರ ಪರಿಚಯ ಇದೆ. ಅವರ ಮಗಳು ಸಿಂಧೂ ಇವಳ ಪರಿಚಯ ಇರಲಿಲ್ಲ.

2. ಸುಮಾರು 4–5 ತಿಂಗಳ ಹಿಂದೆ ಒಂದು ದಿನ ಬೆಳಿಗ್ಗೆ 9.00 ಘಂಟೆಯಿಂದ ಸಾಯಂಕಾಲ 6.00 ಘಂಟೆಯವರೆಗೆ ಚಾಸಾಃ1–ಮಾರುತಿ ಇವರ ಮನೆಯ ಎದುರಿನಲ್ಲಿರುವ ಲೇಔಟನಲ್ಲಿರುವ ಸೈಟಗೆ ಮಣ್ಣು ಹಾಕಲು ಹೋಗಿದ್ದೆ. ಸಾಯಂಕಾಲ 4 ಘಂಟೆ ಸುಮಾರಿಗೆ ಚಾಸಾಃ1 ಮಾರುತಿ ಇವರ ಮನೆಯಲ್ಲಿ ಚಾಸಾಃ9–ಶೋಭಾ ಅಳುತ್ತಿರುವ ಶಬ್ದ ಕೇಳಿಸಿತು ನೋಡಿದಾಗ ಅವರ ಮನೆಯ ಮುಂದೆ ವಿಸಿ ಮೂಲಕ ಹಾಜರಪಡಿಸಲಾದ ಆರೋಪಿತ ಇದ್ದರು.

ಅಳುತ್ತಿರುವುದನ್ನು ನೋಡಿ ನಾವು ಅಲ್ಲಿಗೆ ಹೋಗಿ ವಿಚಾರಿಸಿದಾಗ ಶಾಲೆಯ ಬಸನ್ನು ನಿಲ್ಲಿಸಿ ನನ್ನ ಮಗಳು ಪ್ರಜ್ಞೆ ತಪ್ಪಿ ಬಿದ್ದಿದ್ದಾಳೆ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದು ಕೇಳಿಕೊಂಡರು. ನಾನು ಬಸನ್ನು ನಿಲ್ಲಿಸಲು ಹೋದಾಗ ಬಸ್ ಮುಂದಕ್ಕೆ ಹೋಯಿತು. ನಾನು ಚಾಸಾಃ1- ಮಾರುತಿ ಇವರ ಮನೆಯ ಬಳಿ ನೋಡಿದಾಗ ಆರೋಪಿತ ಹಾಗೂ ಚಾಸಾಃ9 ಮನೆಯ ಗೇಟನ ಒಳಗೆ ಇದ್ದರು. ಮನೆಯ ಮುಖ್ಯ ಬಾಗಿಲು ಲಾಕ್ ಆಗಿತ್ತು. ಹಿತ್ತಲಿನ ಬಾಗಿಲು ತೆರೆದಿತ್ತು. ನಾನೂ ಸಹ ಹಿತ್ತಲ ಬಾಗಿಲಿನಿಂದ ಮನೆಯ ಒಳಗೆ ಹೋಗಿ ನೋಡಿದಾಗ ಮನೆಯ ಒಳಗಡೆ ಕತ್ತಲು ಇತ್ತು. ಮನೆಯ ಒಳಗೆ ಹೋಗಿ ನೋಡಿದಾಗ ಮನೆಯ ಹಾಲನಲ್ಲಿ ಒಬ್ಬ ಹೆಣ್ಣುಮಗಳು ಪ್ರಜ್ಞೆ ತಪ್ಪಿ ಬಿದ್ದಿದ್ದಳು. ಈಗ ನನಗೆ ತೋರಿಸಿದ  ನಿಪಿಃ2 ಪೊಟೊದಲ್ಲಿ ಕಾಣಿಸುತ್ತಿರುವುದು ಮನೆಯ ಒಳಗಿನ ಹಾಲನ ಅದೇ ಸ್ಥಳವಾಗಿರುತ್ತದೆ. ಈಗ ನನಗೆ ತೋರಿಸಿದ ನಿಪಿಃ 4 ಹಾಗೂ 5 ಪೊಟೊಗಳಲ್ಲಿ ಕಾಣುತ್ತಿರುವ ದೇಹ ಆ ದಿನ ನಾನು ನೋಡಿದ ಹೆಣ್ಣುಮಗಳದ್ದಾಗಿರುತ್ತದೆ. ಆಕೆಯನ್ನು ಎತ್ತಿಕೊಂಡು ಹಿತ್ತಲ ಬಾಗಿಲಿನಿಂದ ಹೊರಗೆ ಕರೆದುಕೊಂಡು ಗೇಟ ಬಳಿ ಬಂದೆ. ಆಗ ನೋಡಲಾಗಿ ಆಕೆಯ ಕುತ್ತಿಗೆಯ ಮೇಲೆ ಒಂದು ಭಾಗದಲ್ಲಿ ಕಪ್ಪನೆಯ ಗುರುತು ಇತ್ತು.

3. ಆರೋಪಿತ ಆತನ ಅಣ್ಣ ಹಾಗೂ ಚಾಸಾಃ9- ಶೋಭಾ ಇವರನ್ನು ಒಂದು ಬೈಕನಲ್ಲಿ ಕೂರಿಸಿ ಅವರ ನಡುವೆ ಹೆಣ್ಣುಮಗಳನ್ನು ಕೂರಿಸಿ ದವಾಖಾನೆಗೆ ಕಳಿಸಿಕೊಟ್ಟೆ. ಸಂಜೆ 6 ಘಂಟೆ ಸುಮಾರಿಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದ ಹೆಣ್ಣುಮಗಳು ಮೃತಪಟ್ಟಳು ಎಂದು ಗೊತ್ತಾಯಿತು. ನಾನು ನೋಡಿದ ಘಟನೆಯ ಬಗ್ಗೆ ಪೊಲೀಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆ.

4. ಆರೋಪಿತ ಮೆಹಬೂಬನನ್ನು ವಿಚಾರಣೆ ಮಾಡುವ ಕಾಲದಲ್ಲಿ ನಾನು ಇರಲಿಲ್ಲ. ನಂತರ ಘಟನೆಯ ಬಗ್ಗೆ ತಿಳಿಯಲಾಗಿ ಆರೋಪಿತ ಸಿಂಧೂವನ್ನು ಕೊಲೆ ಮಾಡಿರುತ್ತಾನೆ ಎಂದು

ಗೊತ್ತಾಯಿತು. ಮೃತ ಹೆಣ್ಣುಮಗಳ ತಾಯಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಆರೋಪಿತ ಈ ವಿಚಾರದಲ್ಲಿ ಹೆಣ್ಣುಮಗಳನ್ನು ಕೊಲೆ ಮಾಡಿರುವುದಾಗಿ ಗೊತ್ತಾಯಿತು.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು).**

## <u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

5. ದಿಃ06.03.2023 ರಂದು ಮಧ್ಯಾಹ್ನ 1.00 ಘಂಟೆಯ ಸಮಯಕ್ಕೆ ಚಾಸಾಃ1 ಇವರ ಮನೆಯ ಮುಂಭಾಗದಲ್ಲಿರುವ ಭೂಮರೆಡ್ಡಿ ಸ್ಕೂಲ ಹತ್ತಿರ ಕೆಲಸ ಮಾಡುತ್ತಿದ್ದೆ ಎಂದರೆ ನಿಜ. ಮಧ್ಯಾಹ್ನ 2 ರಿಂದ 2.30 ರ ನಡುವೆ ವಿ ಸಿ ಮೂಲಕ ಹಾಜರಪಡಿಸಲಾದ ಆರೋಪಿ ಚಾಸಾಃ1 ರವರ ಮನೆಯ ಮುಂದೆ ಹೋಗಿ ಬರುವುದನ್ನು ನಾನು ನೋಡಿದೆ ಎಂದರೆ ಸರಿಯಲ್ಲ. ಮಧ್ಯಾಹ್ನ 4.45 ಘಂಟೆ ಸಮಯದಲ್ಲಿ ಚಾಸಾಃ9–ಶೋಭಾ ಚೀರಾಡುತ್ತಿರುವ ಶಬ್ದ ಕೇಳಿ ಹೋಗಿ ನೋಡಿದಾಗ ಅವರ ಮಗಳು ಸಿಂಧು ಪ್ರಜ್ಞೆ ತಪ್ಪಿ ಬಿದ್ದಿರುವುದು ಗೊತ್ತಾಯಿತು ಎಂದರೆ ನಿಜ.

6. ಘಟನೆಯ ಬಗ್ಗೆ ಊರಿನಲ್ಲಿ ಹರಡಿದ್ದ ಸುದ್ದಿ ಏನೆಂದರೆ ಮಧ್ಯಾಹ್ನ 2 ರಿಂದ 2.30 ರ ನಡುವೆ ಮೃತ ಸಿಂಧು ಮನೆಯಲ್ಲಿ ಒಬ್ಬಳೆ ಇದ್ದಾಳೆ ಎನ್ನುವ ವಿಚಾರ ಗೊತ್ತಾದ ಆರೋಪಿ ಮೆಹಬೂಬಸಾಬ ಬಾಣದ ಆಕೆಯ ಮನೆಗೆ ಹೋಗಿ ವೇಲನಿಂದ ಆಕೆಯ ಕುತ್ತಿಗೆ ಬಿಗಿದು ಸಾಯಿಸಿರುತ್ತಾನೆ ಎಂದು ತಿಳಿದು ಬಂತು ಎಂದರೆ ನಿಜ.

7. ದಿಃ11.03.2023 ರಂದು ಪೊಲೀಸರು ಪಂಚನಾಮೆ ಮಾಡಲು ಬಂದಾಗ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ನಿಜ. ದಿಃ06.03.2023 ರಂದು ಮಧ್ಯಾಹ್ನ 1.00 ಘಂಟೆ ಸುಮಾರಿಗೆ ಮೆಹಬೂಬಸಾಬ ಬಾಣದ ಇವರ ಮನೆಯ ಕಡೆಗೆ ಸುತ್ತಾಡಿ ವಾಪಸ್ ತಮ್ಮ ಮನೆಗೆ ಹೋಗಿದ್ದನು. ಮುಂದೆ 2 ಘಂಟೆ ಸುಮಾರಿಗೆ ಮಾರುತಿ ಇವರ ಮಗಳು ಸಿಂಧು ತಮ್ಮ ಮನೆಗೆ

ಬಂದಳು. ನಂತರ 2.30 ಘಂಟೆಯ ಸುಮಾರಿಗೆ ಮೆಹಬೂಬಸಾಬ ಬಾಣದ ಇವರು ಅತ್ತಿತ್ತ ನೋಡುತ್ತಾ ಮಾರುತಿ ಭಜಂತ್ರಿ ಇವರ ಮನೆಯೊಳಗೆ ಹೋದರು ಎಂದು ಪೊಲೀಸರಿಗೆ ನನ್ನ ಹೇಳಿಕೆಯಲ್ಲಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಆ ಭಾಗವನ್ನು ನಿಪಿಃ8 ಎಂದು ಗುರುತಿಸಲಾಯಿತು.

8. ಪ್ರಕರಣವನ್ನು ಇಲ್ಲಿಯೇ ಮುಗಿಸಿಬಿಡೋಣ ಎಂದು ಚಾಸಾಃ9- ಶೋಭಾ ಇವಳಿಗೆ ರೂ.4000/- ಕೊಟ್ಟಿರುವ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಈ ವಿಚಾರವಾಗಿ ನನ್ನ ಹೇಳಿಕಯಲ್ಲಿ "ದಿಃ06.03.2023 ರಂದು ಮುಂಜಾನೆ 9.00 ಘಂಟೆ ಸುಮಾರಿಗೆ ಶೋಭಾ ಸೂಲ್ಕಿಗೆ ಹೋದಳು ಹಾಗೂ ಮಾರುತಿ ಭಜಂತ್ರಿ ...................................................................ಅದಕ್ಕೆ ಮುಂದೆ ಮುಂದೆಯಾಗಿ ಹೇಳುತ್ತಾ ಬಂದಿದ್ದೆನು ಅಂತಾ ವಗೈರೆ ಹೇಳಿದ ಬಗ್ಗೆ ಕೇಳಿ ತಿಳಿಯಿತು"ಎನ್ನುವ ಆ ಹೇಳಿಕೆಯ ಭಾಗವನ್ನು ನಿಪಿಃ8(ಎ) ಎಂದು ಗುರುತಿಸಲಾಯಿತು.

9. ಆರೋಪಿ ಮೆಹಬೂಬಸಾಬ ಬಾಣದ ಚಾಸಾಃ1 - ಮಾರುತಿ ಭಜಂತ್ರಿ ಇವರ ಮನೆಯ ಮುಂದೆ ಮಧ್ಯಾಹ್ನ 1.00 ಘಂಟೆಗೆ ಸುತ್ತಾಡಿ ವಾಪಸ್ ಹೋಗಿದ್ದನ್ನು ನೋಡಿದ್ದರೂ ಸಹ 2.30 ಘಂಟೆಗೆ ಅವರ ಮನೆಯೊಳಗೆ ಹೋಗಿದ್ದನ್ನು ನೋಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ. ಅದೇ ರೀತಿ ನಿಪಿಃ8 ಹಾಗೂ 8(ಎ) ರಲ್ಲಿ ಬರೆದುಕೊಂಡಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು: ಶ್ರೀ. ವಿ ವಿ ಪಾಟೀಲ ಆರೋಪಿ ಪರ ವಕೀಲರಿಂದಃ</u>**

10. ಪೊಲೀಸರು ಸಹಿ ಮಾಡು ಎಂದು ಹೇಳಿದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ನಿಜ. ಆ

ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಿಂಧೂವನ್ನು ಆರೋಪಿ ಕೊಲೆ ಮಾಡಿರುವ ವಿಚಾರ ನಿಮಗೆ ಖುದ್ದು ಗೊತ್ತಿಲ್ಲ ಎಂದರೆ ನಿಜ. ಕೇವಲ ಜನ ಮಾತನಾಡುವುದನ್ನು ಕೇಳಿ ಹೇಳುತ್ತಿದ್ದೀರಿ ಎಂದರೆ ನಿಜ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೆ ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,ಗದಗ
ಗದಗ.

**ಸಿಡಬ್ಲ್ಯೂ:1/ ಪಿಡಬ್ಲ್ಯೂ: 2**

**ದಿ:16.11.2023 ರಂದು ಸಾಕ್ಷಿದಾರರು ಹಾಜರಿದ್ದಾರೆ.**

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಕರಿಂದ**

8. ನನ್ನ ಮಗಳು ಸಿಂಧೂ ಇವಳ ಉತ್ತರಕ್ರಿಯೆಗಾಗಿ ರೂ.4000/- ಹಣವನ್ನು ಆರೋಪಿ ಮೆಹಬೂಬಸಾಬ ಬಾಣದ ನನಗೆ ಕೊಟ್ಟಿದ್ದನು. ಯಾರಿಗೂ ಹೇಳಬೇಡ ಎಂದು ಆ ಹಣವನ್ನು ಆರೋಪಿತನೇ ಕೊಟ್ಟಿದ್ದನು. ನಾನು ಆರೋಪಿತನ ಬಳಿ ಹಣ ಕೇಳಿರಲಿಲ್ಲ. ಆರೋಪಿತನೇ ಕೊಲೆ ಮಾಡಿರುತ್ತಾನೆ ಎಂದು ಊರಿನ ಜನರು ಮಾತನಾಡುತ್ತಿದ್ದರು. ನನ್ನ ಮಗಳು ಸಿಂಧೂವಿನ ಮುಖದ ಮೇಲೆ ತೆರಚಿದ ಕಪ್ಪು ಕಲೆಗಳು ಇದ್ದವು. ಕುತ್ತಿಗೆಯ ಮೇಲೆ ಕಪ್ಪು ಬಣ್ಣದ ಗುರುತು ಇತ್ತು. ಆರೋಪಿ ಮೆಹಬೂಬಸಾಬ ಬಾಣದ ಎರಡೂ ಕೈಗಳ ಮೇಲೆ ತೆರಚಿದಾಗ ಉಂಟಾಗುವಂತಹ ಕಪ್ಪು ಕಲೆಗಳು ಇದ್ದವು. ನನ್ನ ಮಗಳು ಸಿಂಧೂವಿನ ಉತ್ತರಕ್ರಿಯೆಯ ಮೂರನೇ ದಿನಕ್ಕೆ ನಮ್ಮ ಮನೆಯ ಮುಂದೆ ಬಂದ ಆರೋಪಿ ಮೆಹಬೂಬಸಾಬ ಬಾಣದ "ಎಲ್ಲರ ಬಳಿ ನಾನೇ ಕೊಲೆ ಮಾಡಿದ್ದೇನೆಂದು ಹೇಳಿಕೊಂಡು ಅಡ್ಡಾಡುತ್ತಿದ್ದೀಯಾ ನೀನು ಹೇಗೆ ಜೀವನ ಮಾಡುತ್ತಿಯೋ ಮಾಡು ನಾನು ನೋಡಿಕೊಳ್ಳುತ್ತೇನೆ " ಎಂದು ಬೆದರಿಕೆ ಹಾಕಿದ. ನನಗೆ ಹಣ ಕೊಟ್ಟಿದ್ದ ವಿಚಾರ ಹಾಗೂ ಆರೋಪಿತ ನನಗೆ ಬೆದರಿಕೆ ಹಾಕಿದ ವಿಚಾರದಲ್ಲಿ ಆರೋಪಿತನೇ ನನ್ನ ಮಗಳು ಸಿಂಧೂವನ್ನು ಕೊಲೆ ಮಾಡಿರುತ್ತಾನೆ ಎಂದು ಖಚಿತವಾಯಿತು. ಹಾಗಾಗಿ ಮುಂಡರಗಿ ಪೊಲೀಸ ಠಾಣೆಗೆ ಹೋಗಿ ಆರೋಪಿತನ ವಿರುದ್ಧ ನನ್ನ ಮಗಳ ಕೊಲೆಯ ಬಗ್ಗೆ ನಿಪಿ:7 ರಂತೆ ದಿ:11.07.2023 ರಂದು ದೂರು ನೀಡಿರುತ್ತೇನೆ.

9. ದೂರು ಪಡೆದ ಪೊಲೀಸರು ಸಾಯಂಕಾಲ ನಮ್ಮ ಮನೆಗೆ ಬಂದಿರುತ್ತಾರೆ. ಮನೆಯಲ್ಲಿ ನಾನು ಹಾಗೂ ನನ್ನ ಹೆಂಡತಿ ಚಾಸಾ:9-ಶೋಭಾ ಇದ್ದೆವು. ಪೋಲೀಸರಿಗೆ ನನ್ನ ಮಗಳು ಮೃತ

ಸಿಂಧೂ ಬಿದ್ದಿದ್ದ ಜಾಗವನ್ನು ನಾನೇ ತೋರಿಸಿದೆ. ಆ ಸಮಯದಲ್ಲಿ ಪೊಲೀಸರು ನಿಪಿ:2 ಫೋಟೋವನ್ನು ತೆಗೆದರು. ಅದರ ಕ್ರಮಸಂಖ್ಯೆ 3 ರಲ್ಲಿರುವುದು ನನ್ನ ಚಿತ್ರ. ಪೊಲೀಸರೊಂದಿಗೆ ಚಾಸಾ:2–ಮಂಜುನಾಥ ಚಾಸಾ:3–ಹುಚ್ಚಪ್ಪ ಸಹ ಬಂದಿದ್ದರು. ಈಗ ನನಗೆ ತೋರಿಸಿದ ದಾಖಲೆಯ ಮೇಲಿರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆ ನಿಪಿ:1 ಸ್ಥಳ ಪಂಚನಾಮೆಯಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ:1(ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಪಿ:3 ನಕಾಶೆಯ ಮೇಲಿರುವ ಸಹಿಯೂ ನನ್ನದೇ ಇರುತ್ತದೆ. ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ:3(ಬಿ) ಎಂದು ಗುರುತಿಸಲಾಯಿತು.

10. ಮಾರನೇ ದಿನ ಪೊಲೀಸರು ಆರೋಪಿ ಮೆಹಬೂಬಸಾಬ ಬಾಣದನನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. ಇದೇ ಸ್ಥಳದಲ್ಲಿ ಸಿಂಧೂವನ್ನು ಕೊಲೆ ಮಾಡಿರುವುದಾಗಿ ಆರೋಪಿ ಮೆಹಬೂಬಸಾಬ ಬಾಣದ ಪೊಲೀಸರಿಗೆ ತೋರಿಸಿದನು. ವೇಲನಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿರುವುದಾಗಿ ಹೇಳಿ ಬೆಡರೂಮನಲ್ಲಿ ವೇಲನ್ನು ಮುಚ್ಚಿಟ್ಟಿರುತ್ತೇನೆ ಎಂದು ತಿಳಿಸಿದನು. ಬೆಡರೂಮಿನ ಒಳಗೆ ಹೋಗಿ ಬಾಕ್ಸನಲ್ಲಿ ಮುಚ್ಚಿಟ್ಟಿದ್ದ ಒಂದು ವೇಲನ್ನು ತೆಗೆದು ತೋರಿಸಿದನು. ಈಗ ನನಗೆ ತೋರಿಸಿದ ಪೊಟೋದಲ್ಲಿ ಕಾಣುತ್ತಿರುವುದು ಆರೋಪಿ ವೇಲ್ ತೆಗೆದು ಹಾಜರಪಡಿಸುತ್ತಿದ್ದಾನೆ. ಸಾಕ್ಷಿದಾರರು ಗುರುತಿಸಿದ ಆ ಪೊಟೊವನ್ನು ಆರೋಪಿ ಪರ ವಕೀಲರ ತಕರಾರಿಗೊಳಪಟ್ಟು ನಿಪಿ:9 ಎಂದು ಗುರುತಿಸಲಾಯಿತು. ಪೊಟೊದಲ್ಲಿ ಆರೋಪಿತ ಪೊಲೀಸರಿಗೆ ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತಿದ್ದಾನೆ. ಆರೋಪಿ ಪರ ವಕೀಲರ ತಕರಾರಿಗೊಳಪಟ್ಟು ಆ ಪೊಟೊವನ್ನು ನಿಪಿ:10 ಎಂದು ಗುರುತಿಸಲಾಯಿತು. ಆರೋಪಿ ಹಾಜರಪಡಿಸಿದ ವೇಲನ್ನು ಪ್ಯಾಕ ಮಾಡಿ ಪೊಲೀಸರು ಅಮಾನತ್ತುಪಡಿಸಿಕೊಂಡರು. ಆ ವೇಲನ್ನು ನೋಡಿದರೇ ಗುರುತಿಸುತ್ತೇನೆ. (ಸೀಲ್ ಮಾಡಿದ ಪ್ಯಾಕೇಟನಲ್ಲಿ ಹಾಜರಪಡಿಸಲಾದ ವೇಲನ್ನು ನ್ಯಾಯಾಲಯದಲ್ಲಿ ತೆರೆದು ತೋರಿಸಲಾಯಿತು). ಈಗ ನನಗೆ ತೋರಿಸಿದ ವೇಲ್ ಆ ದಿನ

ಆರೋಪಿ ಮೆಹಬೂಬಸಾಬ ಹಾಜರಪಡಿಸಿದ ವೇಲ್ ಆಗಿರುತ್ತದೆ. ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

11. ಘಟನೆ ನಡೆದ ದಿನ ನನ್ನ ಮಗಳು ಸಿಂಧು ಧರಿಸಿದ್ದ ಬಟ್ಟೆಗಳನ್ನು ನೋಡಿದರೇ ಗುರುತಿಸುತ್ತೇನೆ. (ಸೀಲ್ ಮಾಡಿದ ಪ್ಯಾಕೇಟನಲ್ಲಿ ಹಾಜರಪಡಿಸಲಾದ ಬಟ್ಟೆಗಳನ್ನು ನ್ಯಾಯಾಲಯದಲ್ಲಿ ತೆರೆದು ತೋರಿಸಲಾಯಿತು). ಈಗ ನನಗೆ ತೋರಿಸಿದ ಟಾಪ್, ಬಾಟಮ್, ನಿಕ್ಕರ್ ಆ ದಿನ ನನ್ನ ಮಗಳು ಧರಿಸಿದ್ದ ಬಟ್ಟೆಗಳಾಗಿರುತ್ತವೆ. ಅವುಗಳನ್ನು ಮು ಮಾ 2 ರಿಂದ 4 ಎಂದು ಗುರುತಿಸಲಾಯಿತು.

12. ಆರೋಪಿತನನ್ನು ಪೊಲೀಸರು ನಮ್ಮ ಮನೆಗೆ ಕರೆದುಕೊಂಡು ಬಂದಾಗ ಆರೋಪಿತ ವೇಲನ್ನು ತೆಗೆದು ಹಾಜರಪಡಿಸಿ ಕೊಲೆ ಮಾಡಿರುವುದನ್ನು ಒಪ್ಪಿಕೊಂಡ ನಂತರ ಕೊಲೆಗೆ ಕಾರಣ ಕೇಳಲಾಗಿ ಚಾಸಾಃ9–ಶೋಭಾ ಇವಳೊಂದಿಗೆ ಸಲುಗೆಯಿಂದ ಇರಲು ಸಿಂಧೂ ಅಡ್ಡಿಯಾಗಿರುತ್ತಾಳೆ ಎನ್ನುವ ಕಾರಣದಿಂದ ಕೊಲೆ ಮಾಡಿರುತ್ತೇನೆ ಎಂದು ಪೊಲೀಸರ ಬಳಿ ಹೇಳಿರುತ್ತಾನೆ.

## ಪಾಟೀ ಸವಾಲು ಶ್ರೀ ವಿ ವಿ ಪಾಟೀಲ ಆರೋಪಿ ಪರ ವಕೀಲರಿಂದ

13. ಕಾಲಾವಕಾಶ ಕೋರಿರುತ್ತಾರೆ. ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೆ ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,ಗದಗ
ಗದಗ.